# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/25/2015-16 ದಿನಾಂಕ: 05.05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
|---|---|
| ಮೋರಿಗೇರಿ ವೀರಣ್ಣ ತಂದೆ ಲೇಟ್ ಚಂದ್ರಶೇಖರಪ್ಪ ವಾಸ ಚಿಲಗೋಡು ಗ್ರಾಮ ಹಗರಿಬೊಮ್ಮನಹಳ್ಳಿ ತಾಲೂಕು | ಕೆ ಸಾವಿತ್ರಮ್ಮ ಗಂಡ ನಾಗರಾಜ ವಾಸ ಚಿಲಗೋಡು ಗ್ರಾಮ ಹಗರಿ ಬೊಮ್ಮನಹಳ್ಳಿ ತಾಲೂಕು [ಶ್ರೀ ಎಸ್ ಗುರುಬಸವರಾಜ ವಕೀಲರು ಹಗರಿಬೊಮ್ಮನಹಳ್ಳಿ] |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಬಾಚಿಗೊಂಡನಹಳ್ಳಿ | 92/1 | 4.00 ಎಕರೆ |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಬಾಚಿಗೊಂಡನಹಳ್ಳಿ ಗ್ರಾಮದ ಸ.ನಂ. 92/1 ವಿಸ್ತೀರ್ಣ 4.00 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ನೊಂದಣಿ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್12/2015-16 ರಲ್ಲಿ ಪ್ರಸ್ತುತ ಹಕ್ಕುಬದಲಾವಣೆಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:26.11.2015ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ತಾಳೂರು ಪಂಪಾಪತಿ ತಂದೆ ಕರಿಯಪ್ಪ ಇವರ ಆಸ್ತಿಯಾಗಿದ್ದು ಸದರಿಯವರಿಂದ ವಾದಿಗಳು ದಿನಾಂಕ 08.09.2015 ರಂದು ನೊಂದಣಿ ಕ್ರಯ ದಸ್ತಾವೇಜು ಸಂಖ್ಯೆ 2129/2015-16 ರ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆ ಕಾರಣ ಸದರಿ ಕ್ರಯ ಪತ್ರದ ಮೇರೆಗೆ ಕ್ರಯದಾರರಾದ ವಾದಿಗಳ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರತಿವಾದಿಗಳಿಂದ ದಿನಾಂಕ 07.10.2015 ರಂದು ಪ್ರಶ್ನಿತ ಹಕ್ಕುಬದಲಾವಣೆ ಆದೇಶಕ್ಕೆ ತಕರಾರು ಬಂದಿದ್ದು ಇವರ ಪರವಾಗಿ ಶ್ರೀ ಎನ್ ಗುರುಬಸವರಾಜ ವಕೀಲರು ಹಗರಿಬೊಮ್ಮನಹಳ್ಳಿ ಇವರು ವಕಾಲತ್ತುನಾಮೆ ಸಲ್ಲಿಸಿ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ ಸದರಿಯವರ ಪ್ರಕಾರ ಈ ನ್ಯಾಯಾಲಯದ ಪ್ರಕರಣ ಸಂಖ್ಯೆ ಸಂ.ಕಂ.ಪಹಣಿ.ವಿವಾದ/36/2015-16 ರಲ್ಲಿ ಪ್ರಕರಣವು ವಿಚಾರಣೆ ಹಂತದಲ್ಲಿದ್ದು ಉಭಯ ಪ್ರಕರಣಗಳಲ್ಲಿ ತಕರಾರುದಾರರು ಹಾಲಿ ಪ್ರತಿವಾದಿಗಳೇ ಇದ್ದು ಪ್ರಸ್ತುತ ವ್ಯಾಜ್ಯದ

ಜಮೀನನ್ನು ಪ್ರತಿವಾದಿಗಳ ತಂದೆಯವರಾದ ದಿ.ತಾಳೂರು ಕೊಟ್ರಪ್ಪ ತಂದೆ ಕರಿಯಪ್ಪ ಇವರು ದೊಡ್ಡ ಕೊಟ್ರಪ್ಪ ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಸದರಿ ತಾಳೂರು ಕೊಟ್ರಪ್ಪ ಇವರು ದಿನಾಂಕ:05.01.1994 ರಂದು ಮರಣ ಹೊಂದಿರುವುದಾಗಿ ತಿಳಿಸುತ್ತಾ ಸದರಿಯವರಿಗೆ ನಾಲ್ಕು ಜನ ಗಂಡು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳಿದ್ದು ಪ್ರಸ್ತುತ ಜಮೀನಿಗೆ ತಾವುಗಳೇ ನೇರ ವಾರಸುದಾರರಾಗಿರುತ್ತಾರೆ ಆದರೆ ಸದರಿ ವ್ಯಾಜ್ಯದ ಜಮೀನು ಪ್ರತಿವಾದಿಗಳ ಹಕ್ಕು ಅಧೀನದಲಿದ್ದು ಮೋಸದಿಂದ ತಾಳೂರು ಪಂಪಾಪತಿ ಇವರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ವಾದಿಗಳಿಗೆ ಕ್ರಯಕ್ಕೆ ನೀಡಿರುತ್ತಾರೆಂದು ಸದರಿ ಹಕ್ಕುಬದಲಾವಣೆಯನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

ಪ್ರತಿವಾದಿಗಳು ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಆಧಾರದ ಮೇರೆಗೆ ಮಾನ್ಯ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹಗರಿಬೊಮ್ಮನಹಳ್ಳಿ ರಲ್ಲಿ ದಾವೆ ಸಂಖ್ಯೆ ಓ.ಎಸ್.56/2016 ರಲ್ಲಿ ದಾವೆ ಸಲ್ಲಿಸಿದ್ದು ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿದ್ದು ಸದರಿ ನ್ಯಾಯಾಲಯದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ, ಈ ಎಲ್ಲಾ ಅಂಶಗಳನ್ನು ಪರಿಗಣನಗೆ ತೆಗೆದುಕೊಂಡು ಮಾನ್ಯ ಸಿವಿಲ್ ನ್ಯಾಯಾಲಯದ ದಾವೆ ಸಂಖ್ಯೆ ಓ.ಎಸ್.56/2016 ರ ಪ್ರಕರಣದಲ್ಲಿ ಪ್ರಸ್ತುತ ಜಮೀನುಗಳಿಗೆ ಸಂಬಂಧಿಸಿದಂತೆ ತಡೆಯಾಜ್ಞೆಯನ್ನು ನೀಡಿ ಆದೇಶ ನೀಡಿರುವುದರಿಂದ ಪ್ರಸ್ತುತ ಪ್ರಕರಣವು ಸಿವಿಲ್ ಸ್ವರೂಪವಾಗಿರುವುದು ಕಂಡುಬಂದಿದ್ದು ಸದರಿ ಸಿವಿಲ್ ನ್ಯಾಯಾಲಯದ ಆದೇಶವು ಅಂತಿಮವಾಗಿರುವುದರಿಂದ ಸದರಿ ಆದೇಶಕ್ಕೆ ಒಳಪಟ್ಟು ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಬಾಚಿಗೊಂಡನಹಳ್ಳಿ ಗ್ರಾಮದ ಸ.ನಂ. 92/1 ವಿಸ್ತೀರ್ಣ 4.00 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹಗರಿಬೊಮ್ಮನಹಳ್ಳಿ ರಲ್ಲಿ ದಾವೆ ಸಂಖ್ಯೆ ಓ.ಎಸ್.56/2016 ರಲ್ಲಿ ಪ್ರಕರಣವು ಬಾಕಿ ಇದ್ದು ಅಲ್ಲದೆ ಮಾನ್ಯ ಸಿವಿಲ್ ನ್ಯಾಯಾಲಯವು ತಡೆಯಾಜ್ಞೆ ಆದೇಶ ನೀಡಿದ್ದು ಸದರಿ ಸಿವಿಲ್ ನ್ಯಾಯಾಲಯದ ಆದೇಶವು ಅಂತಿಮವಾಗಿರುವುದರಿಂದ ಸದರಿ ಅಂತಿಮ ಆದೇಶಕ್ಕೆ ಒಳಪಟ್ಟು ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 05 .05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

05/05

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ

ಉಪ ತಹಶೀಲ್ದಾರರು, ನಾಡ ಕಛೇರಿ, ತಂಬ್ರಹಳ್ಳಿ

Office of the Deputy Tahsildar, ತಂಬ್ರಹಳ್ಳಿ

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

06/05/16